# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 12-10-2022

## ಚಿಟಗುಪ್ಪಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 119/2022 ಕಲಂ 457, 380 ಐಪಿಸಿ :-

ದಿನಾಂಕ:11/10/2022 ರಂದು 1100 ಗಂಟೆಗೆ ಫಿರ್ಯಾದಿ ಸೈಯದ ಖಾಜಾ ಅಲಿ ತಂದೆ ಸೈಯದ ಶೇಮಶೀರಅಲಿ ಖಾದಿಮ, ವಯ:35 ವರ್ಷ ಜಾತಿ:ಮುಸ್ಲಿಂ, ಸಾ/ಭಾಸ್ಕರನಗರ ಚಿಟಗುಪ್ಪಾ ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಂಶವೇನೆಂದರೆ ಚಿಟಗುಪ್ಪಾ ಪಟ್ಟಣದಲ್ಲಿರುವ ಸೈಯದ ಸಲಾರೆ ಮಕದೂಮ ಹುಸೇನ ದರ್ಗಾದಲ್ಲಿ ಒಂದು ಹುಂಡಿ ಇಟ್ಟಿದ್ದು ದರ್ಗಾಕ್ಕೆ ಬಂದ ಜನರು ಹುಂಡಿಯಲ್ಲಿ ಹಾಕಿರುವ ಹಣವನ್ನು ಪ್ರತಿ ತಿಂಗಳ ನಾಲ್ಕನೇ ತಾರಿಖಿಗೆ ಹುಂಡಿಯಲ್ಲಿನ ಹಣ್ಣ ತೆಗೆಯುತ್ತಿದ್ದು ಪ್ರತಿ ತಿಂಗಳು ಸುಮಾರು 5000/ರೂಪಾಯಿ ಇರುತ್ತವೆ. ಸದರಿ ಹಣ್ಣವನ್ನು ಸೈಯದ ಸಲಾರೆ ಮಕದೂಮ ಹುಸೇನ ದರ್ಗಾದ ಸಲುವಾಗಿ ಖರ್ಚು ಮಾಡುತ್ತೇವೆ. ಪ್ರತಿನಿತ್ಯದಂತೆ ದಿನಾಂಕ 01/10/2022 ರಂದು ಮುಂಜಾನೆ 05:00 ಗಂಟೆಗೆ ಸೈಯದ ಸಲಾರೆ ಮಕದೂಮ ಹುಸೇನ ದರ್ಗಾಕ್ಕೆ ಹೋಗಿ ರಾತ್ರಿ 10:00 ಗಂಟೆಗೆ ದರ್ಗಾದ ಬಾಗಿಲಿಗೆ ಕೀಲಿ ಹಾಕಿಕೊಂಡು ಮನೆಗೆ ಬಂದಿರುತ್ತಾರೆ ಹೀಗಿರುವಾಗ ದಿನಾಂಕ:02-10-2022 ರಂದು ಮುಂಜಾನೆ 05:00 ಗಂಟೆಗೆ ಸೈಯದ ಸಲಾರೆ ಮಕದೂಮ ಹುಸೇನ ದರ್ಗಾಕೆ ಹೋಗಿ ನೋಡಲು ಸೈಯದ ಸಲಾರೆ ಮಕದೂಮ ಹುಸೇನ ದರ್ಗಾಕ್ಕೆ ಹಾಕಿದ ಬಾಗಿಲಿನ ಕೀಲಿ ಮತ್ತು ಹುಂಡಿಯ ಕೀಲಿ ಮುರಿದಿರುತ್ತಾರೆ, ಸದರಿ ಘಟನೆಯು ದಿನಾಂಕ: 01/10/2022 ರಂದು ರಾತ್ರಿ 10:00 ಗಂಟೆಯಿಂದ ದಿನಾಂಕ:02-10-2022 ರಂದು 05:00 ಗಂಟೆಯ ಅವಧಿಯಲ್ಲಿ ಸೈಯದ ಸಲಾರೆ ಮಕದೂಮ ಹುಸೇನ ದರ್ಗಾದ ಬಾಗಿಲಿನ ಕೀಲಿ ಮುರಿದು ದರ್ಗಾದಲ್ಲಿದ ಒಂದು ಹುಂಡಿಯ ಕೀಲಿ ಮುರಿದು ಮತ್ತೊಂದು ಹುಂಡಿಯಲ್ಲಿ ಸುಮಾರು 5000/ರೂಪಾಯಿ ಇರುವ ಹುಂಡಿಯನ್ನೆ ಯಾರೋ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಬಸವಕಲ್ಯಾಣ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 140/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ:11/10/2022 ರಂದು 18:30 ಗಂಟೆಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಬಸವಕಲ್ಯಾಣ ನಗರದ ತ್ರಿಪುರಾಂತದ ಐ.ಬಿ ಯ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಕರೆದು ಅವರಿಗೆ ಒಂದು ರೂಪಾಯಿ ನೀಡಿರಿ, ಮಟ್ಕಾ ನಂಬರ ಹತ್ತಿದರೆ ಒಂದು ರೂಪಾಯಿಗೆ 90 ರೂಪಾಯಿ ಕೊಡುತ್ತೆನೆ. ಅಂತ ಹೇಳಿ ಒಬ್ಬ ವ್ಯಕ್ತಿ ಸಾರ್ವಜನಿಕರಿಂದ ಹಣ ಪಡೆದು ಅವರಿಗೆ ಮಟ್ಕಾ ಚೀಟಿ ಬರೆದು ಕೊಡುತ್ತಿದ್ದಾನೆ ಅಂತ ಖಚೀತ ಬಾತ್ಮಿ ಬಂದಿದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ನೋಡಲು ಅಲ್ಲಿ ಐ.ಬಿ. ಪಕ್ಕದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಜನರಿಗೆ ಕರೆದು ಒಂದು ರೂಪಾಯಿ ನೀಡಿರಿ, ಮಟ್ಕಾ ನಂಬರ ಹತ್ತಿದರೆ ಒಂದು ರೂಪಾಯಿಗೆ 90 ರೂಪಾಯಿ ಕೊಡುತ್ತೆನೆ ಅಂತ ಹೇಳಿ ಸಾರ್ವಜನಿಕರಿಂದ ಹಣ ಪಡೆದು ಅವರಿಗೆ ಮಟ್ಕಾ ಚೀಟಿ ಬರೆದುಕೊಡುತ್ತಿರುವುದನ್ನು ಖಚಿತ ಪಡಿಸಿಕೊಂಡು ದಾಳಿ ಮಾಡಿ ಹಿಡಿದು ವಿಚಾರಿಸಲು ಆತನ ಹೆಸರು ಮಹೇಶ ತಂದೆ ಅಣ್ಣೆಪ್ಪಾ ಪಾವಡಶೆಟ್ಟಿ, ವಯಸ್ಸು 30 ವರ್ಷ, ಜಾತಿ: ಲಿಂಗಾಯತ, ಉ: ಕಾರ ಚಾಲಕ ಸಾ: ಪ್ಯಾಟಿ ಮಂಠಾಳ ತಾ: ಬಸವಕಲ್ಯಾಣ ಅಂತ ಹೇಳಿದನು, ಆತನ ಹತ್ತಿರದಿಂದ 2030/- ರೂಪಾಯಿ ನಗದು ಹಣ ಮತ್ತು ಒಂದು ಬಾಲ ಪೇನ್ನ ಹಾಗೂ ಒಂದು ಮಟ್ಕಾ ನಂಬರ ಬರೆದಿರುವ ಚೀಟಿ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.